**ಕರ್ನಾಟಕ ವಿಧಾನ ಪರಿಷತ್ತು**
**ನೂರ ಐವತ್ತೊಂದನೆಯ ಅಧಿವೇಶನ**

# ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ಎರಡನೇ ತಿದ್ದುಪಡಿ) ವಿಧೇಯಕ, 2023

**(2023ರ ವಿಧಾನಸಭೆಯ ವಿಧೇಯಕ ಸಂಖ್ಯೆ–19)**
**(ಕರ್ನಾಟಕ ವಿಧಾನಸಭೆಯಿಂದ ಅಂಗೀಕಾರವಾದ ರೂಪದಲ್ಲಿ)**

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017 (2017ರ ಕರ್ನಾಟಕ ಅಧಿನಿಯಮ ಸಂಖ್ಯೆ 27)ನ್ನು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ನಾಲ್ಕನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-**(1) ಈ ಅಧಿನಿಯಮವನ್ನು ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ಎರಡನೇ ತಿದ್ದುಪಡಿ) ಅಧಿನಿಯಮ, 2023 ಎಂದು ಕರೆಯತಕ್ಕದ್ದು.

(2) ಇದು 2023ರ ಅಕ್ಟೋಬರ್ 01ನೇ ದಿನಾಂಕದಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

**2. ಪ್ರಕರಣ 2ರ ತಿದ್ದುಪಡಿ.-** ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017 (ಇದರಲ್ಲಿ ಇನ್ನುಮುಂದೆ "ಮೂಲ ಅಧಿನಿಯಮ" ವೆಂದು ಉಲ್ಲೇಖಿಸಲಾಗಿದೆ)ರ ಪ್ರಕರಣ 2ರಲ್ಲಿ,-

(ಎ) ಖಂಡ (80)ರ ನಂತರ, ಈ ಕೆಳಕಂಡ ಖಂಡಗಳನ್ನು ಸೇರಿಸತಕ್ಕದ್ದು, ಎಂದರೆ:-

'(80ಎ) "ಆನ್‌ಲೈನ್ ಗೇಮಿಂಗ್" ಎಂದರೆ, ಅಂತರ್ಜಾಲದಲ್ಲಿ ಅಥವಾ ವಿದ್ಯುನ್ಮಾನ ಸಂಪರ್ಕಜಾಲದಲ್ಲಿ ಆಟವನ್ನಾಡಲು ಆಹ್ವಾನಿಸುವುದು ಹಾಗೂ ಇದು ಆನ್‌ಲೈನ್ ಮನಿ ಗೇಮಿಂಗ್ ಅನ್ನು ಒಳಗೊಳ್ಳುತ್ತದೆ;

(80ಬಿ) "ಆನ್‌ಲೈನ್ ಮನಿ ಗೇಮಿಂಗ್" ಎಂದರೆ, ಆಟಗಾರರು ಆಟ, ಸ್ಕೀಮು, ಸ್ಪರ್ಧೆ ಅಥವಾ ಯಾವುದೇ ಇತರೆ ಚಟುವಟಿಕೆ ಅಥವಾ ಪ್ರಕ್ರಿಯೆಯನ್ನು ಒಳಗೊಂಡಿರುವ ಯಾವುದೇ ಸಂಗತಿಯಲ್ಲಿ ಅದರ ಫಲಿತಾಂಶ ಅಥವಾ ಕಾರ್ಯಕ್ಷಮತೆಯು ಕೌಶಲ್ಯ, ಅವಕಾಶ ಅಥವಾ ಎರಡನ್ನೂ ಆಧರಿಸಿರಲಿ ಅಥವಾ ಇಲ್ಲದಿರಲಿ ಮತ್ತು ಅದು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ಅಂಗೀಕಾರಾರ್ಹವಾಗಿರಲಿ ಅಥವಾ ಅನ್ಯಥಾವಾಗಿರಲಿ, ವರ್ಚುಯಲ್ ಡಿಜಿಟಲ್ ಆಸ್ತಿಯನ್ನು ಒಳಗೊಂಡು ಹಣ ಅಥವಾ ಹಣದ ಮೌಲ್ಯವನ್ನು ಗೆಲ್ಲುವ ನಿರೀಕ್ಷೆಯಲ್ಲಿ ವರ್ಚುಯಲ್ ಡಿಜಿಟಲ್ ಆಸ್ತಿಯನ್ನು ಒಳಗೊಂಡಂತೆ ಹಣ ಅಥವಾ ಹಣದ ಮೌಲ್ಯವನ್ನು ಪಾವತಿಸಿ ಅಥವಾ ಠೇವಣಿ ಮಾಡಿ ಆಡುವ ಆನ್‌ಲೈನ್ ಆಟ;"

(ಬಿ) ಖಂಡ (102)ರ ತರುವಾಯ, ಈ ಕೆಳಕಂಡ ಖಂಡವನ್ನು ಸೇರಿಸತಕ್ಕದ್ದು, ಎಂದರೆ:-

"(102ಎ) "ನಿರ್ದಿಷ್ಟಪಡಿಸಿದ ಕ್ರಮಾರ್ಹ ಕ್ಲೇಮು" ಎಂದರೆ:-–

(i) ಬೆಟ್ಟಿಂಗ್;

(ii) ಕ್ಯಾಸಿನೊಗಳು;

(iii) ಜೂಜು;

(iv) ಕುದುರೆ ರೇಸಿಂಗ್;

(v) ಲಾಟರಿ; ಅಥವಾ

(vi) ಆನ್‌ಲೈನ್ ಮನಿ ಗೇಮಿಂಗ್,

-ಇವುಗಳಲ್ಲಿ ಒಳಗೊಂಡಿರುವ ಅಥವಾ ಅವುಗಳ ರೂಪದಲ್ಲಿರುವ ಕ್ರಮಾರ್ಹ ಕ್ಲೇಮು ;"

(ಸಿ) ಖಂಡ (105) ರ ತರುವಾಯ ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:-

"ಪರಂತು, ನಿರ್ದಿಷ್ಟಪಡಿಸಿದ ಕ್ರಮಾರ್ಹ ಕ್ಲೇಮುಗಳ ಪೂರೈಕೆಗಾಗಿ ಡಿಜಿಟಲ್ ಅಥವಾ ವಿದ್ಯುನ್ಮಾನ ವೇದಿಕೆಯನ್ನು ಹೊಂದಿರುವ, ಪ್ರವರ್ತಿಸುವ ಅಥವಾ ನಿರ್ವಹಿಸುವ ವ್ಯಕ್ತಿಯೂ ಸೇರಿದಂತೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಅಂಥ ಕ್ರಮಾರ್ಹ ಕ್ಲೇಮುಗಳ ಪೂರೈಕೆಯನ್ನು ಆಯೋಜಿಸುವ ಅಥವಾ ವ್ಯವಸ್ಥೆ ಮಾಡುವ, ಅಂಥ ಕ್ರಮಾರ್ಹ ಕ್ಲೇಮುಗಳು ಅವನಿಂದಾಗಲಿ ಅಥವಾ ಅವನ ಮೂಲಕವಾಗಲಿ ಪೂರೈಸಿರಲಿ ಮತ್ತು ಅಂಥ ಕ್ರಮಾರ್ಹ ಕ್ಲೇಮುಗಳ ಪೂರೈಕೆಗಾಗಿ ವರ್ಚುಯಲ್ ಡಿಜಿಟಲ್ ಆಸ್ತಿಯನ್ನು ಒಳಗೊಂಡಂತೆ, ಹಣ ಅಥವಾ ಹಣದ ಮೌಲ್ಯದ ಪ್ರತಿಫಲವನ್ನು ಯಾವುದೇ ರೀತಿಯಲ್ಲಿ ಆತನಿಗೆ ಸಂದಾಯ ಮಾಡಿರಲಿ ಅಥವಾ ಆತನಿಗೆ ಅಥವಾ ಆತನ ಮೂಲಕ ತಲುಪಿಸಿರಲಿ ಅಥವಾ ಆತನ ವಿಲೇವಾರಿಯಲ್ಲಿ ಇರಿಸಿರಲಿ, ಅಂಥ ವ್ಯಕ್ತಿಯನ್ನು ಕ್ರಮಾರ್ಹ ಕ್ಲೇಮುಗಳ ಪೂರೈಕೆದಾರನೆಂದು ಭಾವಿಸತಕ್ಕದ್ದು ಮತ್ತು ನಿರ್ದಿಷ್ಟಪಡಿಸಿದ ಕ್ರಮಾರ್ಹ ಕ್ಲೇಮುಗಳ ಅಂಥ ಪೂರೈಕೆದಾರನು ಅಂಥ ಕ್ರಮಾರ್ಹ ಕ್ಲೇಮುಗಳಿಗೆ ಸಂಬಂಧಿಸಿದಂತೆ ತೆರಿಗೆ ಸಂದಾಯ ಮಾಡುವುದಕ್ಕೆ ಹೊಣೆಗಾರನಾಗಿರುವ ಪೂರೈಕೆದಾರನಾಗಿದ್ದರೆ ಹೇಗೋ ಹಾಗೆ, ಈ ಅಧಿನಿಯಮದ ಎಲ್ಲಾ ಉಪಬಂಧಗಳು ಆತನಿಗೆ ಅನ್ವಯಿಸಕ್ಕದ್ದು;"

(ಡಿ) ಖಂಡ (117)ರ ತರುವಾಯ, ಈ ಕೆಳಕಂಡ ಖಂಡವನ್ನು ಸೇರಿಸತಕ್ಕದ್ದು, ಎಂದರೆ:-

'(117ಎ) "ವರ್ಚುಯಲ್ ಡಿಜಿಟಲ್ ಆಸ್ತಿ" ಎಂದರೆ, ಆದಾಯ ತೆರಿಗೆ ಅಧಿನಿಯಮ, 1961(1961ರ ಕೇಂದ್ರ ಅಧಿನಿಯಮ ಸಂ.43)ರ ಪ್ರಕರಣ 2ರ ಖಂಡ (47 ಎ) ನಲ್ಲಿ ಅದಕ್ಕೆ ನೀಡಲಾದ ಅದೇ ಅರ್ಥವನ್ನು ಹೊಂದಿರತಕ್ಕದ್ದು;'.

**3. ಪ್ರಕರಣ 24ರ ತಿದ್ದುಪಡಿ.-** ಮೂಲ ಅಧಿನಿಯಮದ ಪ್ರಕರಣ 24 ರಲ್ಲಿ,-

(ಎ) ಖಂಡ (xi)ರಲ್ಲಿ, ಕೊನೆಯಲ್ಲಿ ಬರುವ "ಮತ್ತು" ಎಂಬ ಪದವನ್ನು ಬಿಟ್ಟುಬಿಡತಕ್ಕದ್ದು;

(ಬಿ) ಖಂಡ (xi)ರ ತರುವಾಯ, ಈ ಕೆಳಕಂಡ ಖಂಡವನ್ನು ಸೇರಿಸತಕ್ಕದ್ದು, ಎಂದರೆ:-

"(xiಎ) ಆನ್‌ಲೈನ್ ಮನಿ ಗೇಮಿಂಗ್ ಅನ್ನು ಭಾರತದ ಹೊರಗಿನ ಸ್ಥಳದಿಂದ ಭಾರತದಲ್ಲಿರುವ ವ್ಯಕ್ತಿಗೆ ಪೂರೈಕೆ ಮಾಡುವ ಪ್ರತಿಯೊಬ್ಬ ವ್ಯಕ್ತಿಯು; ಮತ್ತು".

**4. ಅನುಸೂಚಿ III ರ ತಿದ್ದುಪಡಿ.-** ಮೂಲ ಅಧಿನಿಯಮದ ಅನುಸೂಚಿ III ರಲ್ಲಿ, ಖಂಡಿಕೆ 6 ರಲ್ಲಿ "ಲಾಟರಿ, ಬೆಟ್ಟಿಂಗ್ ಮತ್ತು ಜೂಜನ್ನು" ಎಂಬ ಪದಗಳ ಬದಲಾಗಿ "ನಿರ್ದಿಷ್ಟಪಡಿಸಿದ ಕ್ರಮಾರ್ಹ ಕ್ಲೇಮುಗಳನ್ನು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**5. ತಾತ್ಕಾಲಿಕ ಉಪಬಂಧ.-** ಈ ಅಧಿನಿಯಮದ ಮೇರೆಗೆ ಮಾಡಿರುವ ತಿದ್ದುಪಡಿಗಳು ಬೆಟ್ಟಿಂಗ್, ಕ್ಯಾಸಿನೊ, ಜೂಜು, ಕುದುರೆ ರೇಸಿಂಗ್, ಲಾಟರಿ ಅಥವಾ ಆನ್‌ಲೈನ್ ಗೇಮಿಂಗ್ ಅನ್ನು ನಿಷೇಧಿಸುವ, ನಿರ್ಬಂಧಿಸುವ ಅಥವಾ ನಿಯಂತ್ರಿಸುವುದಕ್ಕಾಗಿ ಉಪಬಂಧ ಕಲ್ಪಿಸುವ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರೆ ಕಾನೂನಿನ ಉಪಬಂಧಗಳಿಗೆ ಬಾಧಕವಾಗತಕ್ಕದ್ದಲ್ಲ. ಆದಾಗ್ಯೂ,-

(ಎ) ಕ್ಯಾಸಿನೋಗಳು, ಕುದುರೆ ರೇಸಿಂಗ್ ಮತ್ತು ಆನ್‌ಲೈನ್ ಗೇಮಿಂಗ್ ಮೇಲಿನ ತೆರಿಗೆ ವಿಧಿಸುವಿಕೆಯು ಸದರಿ ವ್ಯವಹಾರವನ್ನು ಕ್ರಮಬದ್ಧಗೊಳಿಸುವುದಿಲ್ಲ; ಮತ್ತು

(ಬಿ) ಅದೇ ಕ್ರಮದಲ್ಲಿ ಎಸಗಲಾದ ಯಾವುದೇ ಅಪರಾಧವು ಕ್ರಿಮಿನಲ್ ಕ್ರಮದಿಂದ ವಿನಾಯಿತಿ ಹೊಂದಿರುವುದಿಲ್ಲ.

**6. ನಿರಸನ ಮತ್ತು ಉಳಿಸುವಿಕೆಗಳು.-** (1) ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ಅಧ್ಯಾದೇಶ, 2023 (2023ರ ಕರ್ನಾಟಕ ಅಧ್ಯಾದೇಶ ಸಂ. 04)ನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

(2) ಅಂಥ ನಿರಸನವು ಏನೇ ಒಳಗೊಂಡಿದ್ದರೂ ಸದರಿ ಅಧ್ಯಾದೇಶದ ಅಡಿಯಲ್ಲಿ ಏನೇ ಮಾಡಿದ್ದರೂ ಅಥವಾ ಯಾವುದೇ ಕ್ರಮವನ್ನು ಕೈಗೊಂಡಿದ್ದರೂ ಈ ಅಧಿನಿಯಮದ ಅಡಿಯಲ್ಲಿ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು.

ಈ ವಿಧೇಯಕವು ಭಾರತ ಸಂವಿಧಾನದ 199ನೇ ಅನುಚ್ಛೇದದ ಅರ್ಥ ವ್ಯಾಪ್ತಿಯ ಮೇರೆಗೆ ಧನವಿಧೇಯಕವೆಂದು ಪ್ರಮಾಣೀಕರಿಸುತ್ತೇನೆ.

ಬೆಂಗಳೂರು
ದಿನಾಂಕ :

**ಸಭಾಧ್ಯಕ್ಷರು**
ಕರ್ನಾಟಕ ವಿಧಾನಸಭೆ

# ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

(ವಿಧೇಯಕವನ್ನು ಮಂಡಿಸುವಾಗ ಲಗತ್ತಿಸಿದಂತೆ)

ದಿನಾಂಕ: 02-08-2023 ರಂದು ನಡೆದ ಜಿಎಸ್‌ಟಿ ಪರಿಷತ್ತಿನ 51ನೇ ಸಭೆಯ ಶಿಫಾರಸ್ಸುಗಳನ್ವಯ ಆನ್‌ಲೈನ್ ಗೇಮಿಂಗ್, ಆನ್‌ಲೈನ್ ಮನಿ ಗೇಮಿಂಗ್, ನಿರ್ದಿಷ್ಟಪಡಿಸಿದ ಕ್ರಮಾರ್ಹ ಕ್ಲೇಮುಗಳು ಹಾಗೂ ವರ್ಚುಯಲ್ ಡಿಜಿಟಲ್ ಆಸ್ತಿಗಳಿಗೆ ಸಂಬಂಧಿಸಿದಂತೆ ಕೇಂದ್ರ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017 (2017ರ ಕೇಂದ್ರ ಅಧಿನಿಯಮ ಸಂ. 12)ರ ಪ್ರಕರಣ 2, ಪ್ರಕರಣ 24, ಮತ್ತು ಅನುಸೂಚಿ IIIಕ್ಕೆ ತಿದ್ದುಪಡಿ ಮಾಡಲಾಗಿದ್ದು, ಅದನ್ನು ಕೇಂದ್ರ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ಅಧಿನಿಯಮ, 2023 (2023ರ ಕೇಂದ್ರ ಅಧಿನಿಯಮ ಸಂ. 30)ರ ಮೂಲಕ ಸೇರಿಸಲಾಗಿದೆ.

ಜಿಎಸ್‌ಟಿ ಪರಿಷತ್ತಿನ ಸಚಿವಾಲಯವು, 01-10-2023ರಿಂದ ಜಾರಿಗೆ ಬರುವಂತೆ ಸಂಬಂಧಪಟ್ಟ ರಾಜ್ಯದ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮಕ್ಕೆ ಸಂವಾದಿ ತಿದ್ದುಪಡಿಗಳನ್ನು ಸೇರಿಸುವಂತೆ 11-08-2023 ರಂದು ತಿಳಿಸಿರುತ್ತದೆ. ಹಾಗಾಗಿ ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017 (2017ರ ಕರ್ನಾಟಕ ಅಧಿನಿಯಮ 27)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ವಿಷಯವು ತುರ್ತು ಸ್ವರೂಪದ್ದಾಗಿರುವುದರಿಂದ ಮತ್ತು ರಾಜ್ಯ ವಿಧಾನಮಂಡಲದ ಉಭಯ ಸದನಗಳು ಅಧಿವೇಶನದಲ್ಲಿಲ್ಲದಿರುವುದರಿಂದ, ಮೇಲಿನ ಉದ್ದೇಶವನ್ನು ಸಾಧಿಸಲು ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ಅಧ್ಯಾದೇಶ, 2023 (2023ರ ಕರ್ನಾಟಕ ಅಧ್ಯಾದೇಶ 04)ನ್ನು ಪ್ರಖ್ಯಾಪಿಸಲಾಗಿತ್ತು.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ಅಧ್ಯಾದೇಶ, 2023 (2023ರ ಕರ್ನಾಟಕ ಅಧ್ಯಾದೇಶ 04)ರ ಮೇರೆಗೆ ಮಾಡಿರುವ ತಿದ್ದುಪಡಿಗಳು ಬೆಟ್ಟಿಂಗ್, ಕ್ಯಾಸಿನೊ, ಜೂಜು, ಕುದುರೆ ರೇಸಿಂಗ್, ಲಾಟರಿ ಅಥವಾ ಆನ್‌ಲೈನ್ ಗೇಮಿಂಗ್ ಅನ್ನು ನಿಷೇಧಿಸುವ, ನಿರ್ಬಂಧಿಸುವ ಅಥವಾ ನಿಯಂತ್ರಿಸುವುದಕ್ಕಾಗಿ ಉಪಬಂಧ ಕಲ್ಪಿಸುವ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರೆ ಕಾನೂನಿನ ಉಪಬಂಧಗಳಿಗೆ ಬಾಧಕವಾಗತಕ್ಕದ್ದಲ್ಲ. ಆದಾಗ್ಯೂ,-

(ಎ) ಕ್ಯಾಸಿನೋಗಳು, ಕುದುರೆ ರೇಸಿಂಗ್ ಮತ್ತು ಆನ್‌ಲೈನ್ ಗೇಮಿಂಗ್ ಮೇಲಿನ ತೆರಿಗೆ ವಿಧಿಸುವಿಕೆಯು ಸದರಿ ವ್ಯವಹಾರವನ್ನು ಕ್ರಮಬದ್ಧಗೊಳಿಸುವುದಿಲ್ಲ; ಮತ್ತು

(ಬಿ) ಅದೇ ಕ್ರಮದಲ್ಲಿ ಎಸಗಲಾದ ಯಾವುದೇ ಅಪರಾಧವು ಕ್ರಿಮಿನಲ್ ಕ್ರಮದಿಂದ ವಿನಾಯಿತಿ ಹೊಂದಿರುವುದಿಲ್ಲ.

ಈ ವಿಧೇಯಕವು ಸದರಿ ಅಧ್ಯಾದೇಶದ ಬದಲಿ ವಿಧೇಯಕವಾಗಿದೆ.

ಆದ್ದರಿಂದ ಈ ವಿಧೇಯಕ.

.

# ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಹೆಚ್ಚಿನ ಆರ್ಥಿಕ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯ ವಿಧಾನ ಮತ್ತು ನಡವಳಿಕೆ ನಿಯಮಗಳ 77ನೇ ನಿಯಮದ (1)ನೇ ಉಪನಿಯಮದ ಮೂಲಕ ಅಗತ್ಯಪಡಿಸಲಾದಂತೆ ವಿವರಣಾತ್ಮಕ ಹೇಳಿಕೆ.**

ದಿನಾಂಕ: 02-08-2023 ರಂದು ನಡೆದ ಜಿಎಸ್‌ಟಿ ಪರಿಷತ್ತಿನ 51ನೇ ಸಭೆಯ ಶಿಫಾರಸ್ಸುಗಳನ್ವಯ ಕೇಂದ್ರ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017 (2017ರ ಕೇಂದ್ರ ಅಧಿನಿಯಮ ಸಂ. 12)ರ ಮೂಲಕ ಆನ್‌ಲೈನ್ ಗೇಮಿಂಗ್, ಆನ್‌ಲೈನ್ ಮನಿ ಗೇಮಿಂಗ್, ನಿರ್ದಿಷ್ಟಪಡಿಸಿದ ಕ್ರಮಾರ್ಹ ಕ್ಲೇಮುಗಳು ಹಾಗೂ ವರ್ಚುಯಲ್ ಡಿಜಿಟಲ್ ಆಸ್ತಿಗಳಿಗೆ ಸಂಬಂಧಿಸಿದ ಪ್ರಕರಣ 2, ಪ್ರಕರಣ 24, ಮತ್ತು ಅನುಸೂಚಿ IIIಕ್ಕೆ ತಿದ್ದುಪಡಿ ಮಾಡಲಾಗಿದ್ದು, ಅದನ್ನು ಕೇಂದ್ರ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ಅಧಿನಿಯಮ, 2023 (2023ರ ಕೇಂದ್ರ ಅಧಿನಿಯಮ ಸಂ. 30)ರ ಮೂಲಕ ಸೇರಿಸಲಾಗಿದೆ.

ಜಿಎಸ್‌ಟಿ ಪರಿಷತ್ತಿನ ಸಚಿವಾಲಯವು, 01-10-2023ರಿಂದ ಜಾರಿಗೆ ಬರುವಂತೆ ಸಂಬಂಧಪಟ್ಟ ರಾಜ್ಯದ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮಕ್ಕೆ ಸಂವಾದಿ ತಿದ್ದುಪಡಿಗಳನ್ನು ಸೇರಿಸುವಂತೆ 11-08-2023 ರಂದು ತಿಳಿಸಿರುವುದರಿಂದ. ಹಾಗಾಗಿ ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017 (2017ರ ಕರ್ನಾಟಕ ಅಧಿನಿಯಮ 27)ನ್ನು ತಿದ್ದುಪಡಿ ಮಾಡುವುದು ಅಗತ್ಯವೆಂದು ಪರಿಗಣಿಸಲಾಗಿದೆ.

ವಿಷಯವು ತುರ್ತು ಸ್ವರೂಪದ್ದಾಗಿರುವುದರಿಂದ ಮತ್ತು ರಾಜ್ಯ ವಿಧಾನಮಂಡಲದ ಉಭಯ ಸದನಗಳು ಅಧಿವೇಶನದಲ್ಲಿಲ್ಲದಿರುವುದರಿಂದ, ಮೇಲಿನ ಉದ್ದೇಶವನ್ನು ಸಾಧಿಸಲು ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ಅಧ್ಯಾದೇಶ, 2023 (2023ರ ಕರ್ನಾಟಕ ಅಧ್ಯಾದೇಶ 04)ನ್ನು ಪ್ರಖ್ಯಾಪಿಸಲಾಗಿತ್ತು.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ಅಧ್ಯಾದೇಶ, 2023 (2023ರ ಕರ್ನಾಟಕ ಅಧ್ಯಾದೇಶ 04)ರ ಮೇರೆಗೆ ಮಾಡಿರುವ ತಿದ್ದುಪಡಿಗಳು ಬೆಟ್ಟಿಂಗ್, ಕ್ಯಾಸಿನೊ, ಜೂಜು, ಕುದುರೆ ರೇಸಿಂಗ್, ಲಾಟರಿ ಅಥವಾ ಆನ್‌ಲೈನ್ ಗೇಮಿಂಗ್ ಅನ್ನು ನಿಷೇಧಿಸುವ, ನಿರ್ಬಂಧಿಸುವ ಅಥವಾ ನಿಯಂತ್ರಿಸುವುದಕ್ಕಾಗಿ ಉಪಬಂಧ ಕಲ್ಪಿಸುವ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರೆ ಕಾನೂನಿನ ಉಪಬಂಧಗಳಿಗೆ ಬಾಧಕವಾಗತಕ್ಕದ್ದಲ್ಲ. ಆದಾಗ್ಯೂ,-

(ಎ) ಕ್ಯಾಸಿನೋಗಳು, ಕುದುರೆ ರೇಸಿಂಗ್ ಮತ್ತು ಆನ್‌ಲೈನ್ ಗೇಮಿಂಗ್ ಮೇಲಿನ ತೆರಿಗೆ ವಿಧಿಸುವಿಕೆಯು ಸದರಿ ವ್ಯವಹಾರವನ್ನು ಕ್ರಮಬದ್ಧಗೊಳಿಸುವುದಿಲ್ಲ; ಮತ್ತು

(ಬಿ) ಅದೇ ಕ್ರಮದಲ್ಲಿ ಎಸಗಲಾದ ಯಾವುದೇ ಅಪರಾಧವು ಕ್ರಿಮಿನಲ್ ಕ್ರಮದಿಂದ ವಿನಾಯಿತಿ ಹೊಂದಿರುವುದಿಲ್ಲ.

ಈ ವಿಧೇಯಕವು ಸದರಿ ಅಧ್ಯಾದೇಶದ ಬದಲಿ ವಿಧೇಯಕವಾಗಿದೆ.

**ಸಿದ್ದರಾಮಯ್ಯ**
ಮುಖ್ಯ ಮಂತ್ರಿ

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

## ಅನುಬಂಧ

## ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017

## (2017ರ ಕರ್ನಾಟಕ ಅಧಿನಿಯಮ 27) ರ ಉದ್ಧೃತಭಾಗ

**X X XX XX**

**2. ಪರಿಭಾಷೆಗಳು.-**ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,- (1) "ಕ್ರಮಾರ್ಹ ಕ್ಲೇಮು" ಎಂದರೆ ಸ್ವತ್ತು ಹಸ್ತಾಂತರ ಅಧಿನಿಯಮ, 1882ರ (1882ರ ಕೇಂದ್ರ ಅಧಿನಿಯಮ 4) ಪ್ರಕರಣ 3 ರಲ್ಲಿ ಇದಕ್ಕೆ ನೀಡಲಾದ ಅರ್ಥವನ್ನೇ ಇಲ್ಲೂ ಹೊಂದಿರತಕ್ಕದ್ದು;

**X X XX XX**

(80) **"ಅಧಿಸೂಚನೆ"** ಎಂದರೆ, ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟಿಸಲಾದ ಅಧಿಸೂಚನೆ ಹಾಗೂ 'ಅಧಿಸೂಚಿಸು' ಮತ್ತು 'ಅಧಿಸೂಚಿಸಲಾಗಿದೆ' ಎನ್ನುವ ಪದಾವಳಿಗಳನ್ನು ತದಾನುಸಾರವಾಗಿ ಅರ್ಥೈಸತಕ್ಕದ್ದು;

**X X XX XX**

(102) **"ಸೇವೆಗಳು"** ಎಂದರೆ, ಸರಕು, ಹಣ ಮತ್ತು ಭದ್ರತಾಪತ್ರಗಳಲ್ಲದವುಗಳು, ಆದರೆ ಹಣದ ಉಪಯೋಗಕ್ಕೆ ಸಂಬಂಧಿಸಿದ ಅಥವಾ ಒಂದು ನಮೂನೆಯ ನಾಣ್ಯಪದ್ಧತಿ (ಕರೆನ್ಸಿ)ಯಿಂದ ಮತ್ತೊಂದು ನಮೂನೆಯ ನಾಣ್ಯಪದ್ಧತಿ (ಕರೆನ್ಸಿ)ಗೆ ನಗದಿನ ಮೂಲಕವಾಗಿಯಾಗಲೀ ಅಥವಾ ಇತರ ಯಾವುದೇ ವಿಧಾನಗಳ ಮೂಲಕವಾಗಲೀ ಅದರ ಪರಿವರ್ತನೆ ಮತ್ತು ಆ ಕಾರ್ಯಕ್ಕಾಗಿ ಪ್ರತ್ಯೇಕ ಪ್ರತಿಫಲವನ್ನು ವಿಧಿಸುವ ಚಟುವಟಿಕೆಗಳನ್ನು ಒಳಗೊಳ್ಳುತ್ತದೆ;

**ವಿವರಣೆ.-**ಸಂದೇಹಗಳ ನಿವಾರಣೆಗಾಗಿ, "ಸೇವೆಗಳು" ಎಂಬ ಪದಾವಳಿಯಲ್ಲಿ ಭದ್ರತೆಗಳಲ್ಲಿನ ವ್ಯವಹಾರಗಳಿಗೆ ಅನುಕೂಲ ಅಥವಾ ವ್ಯವಸ್ಥೆ ಮಾಡಿಕೊಡುವುದನ್ನು ಒಳಗೊಳ್ಳುತ್ತದೆ ಎಂದು ಈ ಮೂಲಕ ಸ್ಪಷ್ಟೀಕರಿಸಲಾಗಿದೆ;

**X X XX XX**

(105) **"ಪೂರೈಕೆದಾರ"** ಎಂದರೆ, ಯಾವುದೇ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡಕ್ಕೆ ಸಂಬಂಧಿಸಿದಂತೆ, ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡನ್ನು ಪೂರೈಕೆ ಮಾಡುವ ವ್ಯಕ್ತಿ ಮತ್ತು ಇದು, ಪೂರೈಕೆ ಮಾಡುವ ಸರಕುಗಳು ಅಥವಾ ಸೇವೆಗಳು ಅಥವಾ ಅವುಗಳೆರಡಕ್ಕೆ ಸಂಬಂಧಿಸಿದಂತೆ ಅಂತಹ ಪೂರೈಕೆದಾರನ ಪರವಾಗಿ ಆ ಕಾರ್ಯ ಮಾಡುವ ಒಬ್ಬ ಏಜೆಂಟ್‌ನನ್ನು ಒಳಗೊಳ್ಳತಕ್ಕದ್ದು;

**X X XX XX**

(117) **"ಸಿಂಧುವಾದ ರಿಟರ್ನ್"** ಎಂದರೆ, ಪ್ರಕರಣ 39ರÀ ಉಪಪ್ರಕರಣ (1)ದ ಅಡಿಯಲ್ಲಿ ಒದಗಿಸಿ ಅದರಲ್ಲಿರುವ ಸ್ವಯಂ-ನಿರ್ಧರಿತ ತೆರಿಗೆಯನ್ನು ಪೂರ್ಣವಾಗಿ ಸಂದಾಯ ಮಾಡಲಾಗಿರುವ ಒಂದು ರಿಟರ್ನ್;

**X X XX XX**

**24. ಕೆಲವೊಂದು ಪ್ರಕರಣಗಳಲ್ಲಿ ಕಡ್ಡಾಯ ನೋಂದಣಿ.-** ಪ್ರಕರಣ 22ರ ಉಪ-ಪ್ರಕರಣ (1)ರಲ್ಲಿ ಏನೇ ಒಳಗೊಂಡಿದ್ದರೂ, ಈ ಕೆಳಕಂಡ ಪ್ರವರ್ಗಗಳ ವ್ಯಕ್ತಿಗಳು ಈ ಅಧಿನಿಯಮದ ಅಡಿಯಲ್ಲಿ ನೋಂದಾಯಿಸಿಕೊಳ್ಳುವುದು ಅಗತ್ಯವಾಗಿರತಕ್ಕದ್ದು:-

**X X XX XX**

(xi) ಭಾರತದ ಹೊರಗಡೆಯಿರುವ ಒಂದು ಸ್ಥಳದಿಂದ, ನೋಂದಾಯಿತ ವ್ಯಕ್ತಿಯನ್ನು ಹೊರತುಪಡಿಸಿದ ಭಾರತದಲ್ಲಿನ ಒಬ್ಬ ವ್ಯಕ್ತಿಗೆ, ಆನ್‌ಲೈನ್ ಮಾಹಿತಿ ಮತ್ತು ದತ್ತಾಂಶ ಸಂಗ್ರಹದ ಪ್ರವೇಶಾವಕಾಶ ಅಥವಾ ಮರುಪ್ರಾಪ್ತಿ ಸೇವೆಗಳ ಪೂರೈಕೆಯನ್ನು ಮಾಡುತ್ತಿರುವ ಪ್ರತಿಯೊಬ್ಬ ವ್ಯಕ್ತಿ; ಮತ್ತು

**X X XX XX**

## ಅನುಸೂಚಿ-III

**[ಪ್ರಕರಣ 7ನ್ನು ನೋಡಿ]**

**ಸರಕುಗಳ ಪೂರೈಕೆಯೂ ಅಲ್ಲ ಅಥವಾ ಸೇವೆಗಳ ಪೂರೈಕೆಯೂ ಅಲ್ಲ ಎಂದು ಪರಿಗಣಿಸಬೇಕಾದ ಚಟುವಟಿಕೆಗಳುಅಥವಾ ವ್ಯವಹಾರಗಳು**

**X X XX XX**

6. ಲಾಟರಿ, ಬೆಟ್ಟಿಂಗ್ ಮತ್ತು ಜೂಜನ್ನು ಹೊರತುಪಡಿಸಿದ ಕ್ರಮಾರ್ಹ ಕ್ಲೇಮುಗಳು.

**X X XX XX**

ಸರ್ಕಾರಿ ಮುದ್ರಣಾಲಯ, ಸುವರ್ಣ ವಿಧಾನಸೌಧ, ಬೆಳಗಾವಿ, ಪಿ7, ಕಾಸೂ , ಪ್ರತಿಗಳು 300, 11ನೇ ಡಿಸೆಂಬರ್ 2023

**KARNATAKA LEGISLATIVE COUNCIL**
**ONE HUNDRED AND FIFTY FIRST SESSION**

# THE KARNATAKA GOODS AND SERVICES TAX (SECOND AMENDMENT) BILL, 2023

**(LA Bill No. 19 of 2023)**

**(As passed by the Karnataka Legislative Assembly)**

A Bill further to amend the Karnataka Goods and Services Tax Act, 2017.

Whereas, it is expedient further to amend the Karnataka Goods and Services Tax Act, 2017 (Karnataka Act 27 of 2017), for the purpose hereinafter appearing;

Be it enacted by the Karnataka State Legislature in the Seventy-fourth year of the Republic of India as follows:-

**1. Short title and commencement.-** (1) This Act may be called the Karnataka Goods and Services Tax (Second Amendment) Act, 2023.

(2) It shall be deemed to have come into force with effect from 1st day of October 2023.

**2. Amendment of section 2.-** In the Karnataka Goods and Services Tax Act, 2017 (hereinafter referred to as the principal Act), in section 2,

(a) after clause (80), the following clauses shall be inserted, namely:-

"(80A) "online gaming" means offering of a game on the internet or an electronic network and includes online money gaming;

(80B) "online money gaming" means online gaming in which players pay or deposit money or money's worth, including virtual digital assets, in the expectation of winning money or money's worth, including virtual digital assets, in any event including game, scheme, competition or any other activity or process, whether or not its outcome or performance is based on skill, chance or both and whether the same is permissible or otherwise under any other law for the time being in force;"

(b) after clause (102), the following clause shall be inserted, namely:-

“(102A) "specified actionable claim" means the actionable claim involved in or by way of

(i) betting;

(ii) casinos;

(iii) gambling:

(iv) horse racing:

(v) lottery; or

(vi) online money gaming;”

(c) after clause (105), the following proviso shall be inserted, namely:-

"Provided that, a person who organises or arranges, directly or indirectly, supply of specified actionable claims, including a person who owns, operates or manages digital or electronic platform for such supply, shall be deemed to be a supplier of such actionable claims, whether such actionable claims are supplied by him or through him and whether consideration in money or money's worth, including virtual digital assets, for supply of such actionable claims is paid or conveyed to him or through him or placed at his disposal in any manner, and all the provisions of this Act shall apply to such supplier of specified actionable claims, as if he is the supplier liable to pay the tax in relation to the supply of such actionable claims;"

(d) after clause (117), the following clause shall be inserted, namely:-

‘(117A) "virtual digital asset" shall have the same meaning as assigned to it in clause (47A) of section 2 of the Income-tax Act, 1961(Central Act No 43 of 1961);".

**3. Amendment of section 24.-** In section 24 of the principal Act,

(a) in clause (xi), the word "and", occurring at the end, shall be omitted;

(b) after clause (xi), the following clause shall be inserted, namely:-

"(xia) every person supplying online money gaming from a place outside India to a person in India; and".

**4. Amendment of Schedule III.-** In the principal Act, in Schedule III, in paragraph 6, for the words "lottery, betting and gambling", the words "specified actionable claims" shall be substituted.

**5. Transitory provision.-** The amendments made under this Act shall be without prejudice to the provisions of any other law for the time being in force, providing for prohibiting, restricting or regulating betting, casino, gambling, horse racing, lottery or online gaming. However,-

(a) imposition of tax on Casinos, Horse racing and Online Gaming does not regularise the said trade; and

(b) any crime committed in the course of the same is not immune from criminal action.

**6. Repeal and savings.-** (1) The Karnataka Goods and Services Tax (Amendment) Ordinance, 2023 (Karnataka Ordinance 04 of 2023) is hereby repealed.

(2) Notwithstanding such repeal, anything done or any action taken under the principal Act, as amended by the said Ordinance, shall be deemed to have been done or taken under the principal Act, as amended by this Act.

I hereby certify that this Bill is a Money Bill within the meaning of Article 199 of the Constitution of India.

Bengaluru
Date:

**SPEAKER**
Karnataka Legislative Assembly

## STATEMENT OF OBJECTS AND REASONS

**(As appended to at the time of Introduction)**

With the recommendations of GST Council, in its 51st meeting held on 02-08-2023, sections 2, 24 and Schedule III of the Central Goods and Services Tax Act, 2017 (Central Act No. 12 of 2017) was amended relating to the online gaming, online money gaming, specified actionable claims and virtual digital asset have been incorporated by the Central Goods and Services (Amendment) Act, 2023 (Central Act No. 30 of 2023).

Whereas, the GST Council Secretariat has communicated on 11-08-2023 to incorporate the corresponding amendments in respective state Goods and Services Tax Act with effect from 01-10-2023. Therefore It is considered necessary further to amend the Karnataka Goods and Services Tax Act, 2017 (Karnataka Act 27 of 2017).

As the matter was urgent and both Houses of the State Legislature were not in a session, The Karnataka Goods and Services Tax (Amendment) Ordinance, 2023 (Karnataka Ordinance 04 of 2023) was promulgated to achieve the above object.

The amendments made under the Karnataka Goods and Services Tax (Amendment) Ordinance, 2023 (Karnataka Ordinance 04 of 2023), shall be without prejudice to the provisions of any other law for the time being in force, providing for prohibiting, restricting or regulating betting, casino, gambling, horse racing, lottery or online gaming. However,-

(a) imposition of tax on Casinos, Horse racing and Online Gaming does not regularise the said trade; and

(b) any crime committed in the course of the same is not immune from criminal action.

This Bill seeks to replace the said Ordinance.

Hence, the Bill.

## FINANCIAL MEMORANDUM

There is no extra expenditure involved in the proposed legislative measure.

**SIDDARAMAIAH**
Chief Minister

**K.R. MAHALAKSHMI**
Secretary
Karnataka Legislative Council

**EXPLANATORY STATEMENT AS REQUIRED BY SUB-RULE (1) OF RULE 77 OF THE RULES OF PROCEDURE AND CONDUCT OF BUSINESS IN THE KARNATAKA LEGISLATIVE COUNCIL.**

With the recommendations of GST Council, in its 51st meeting held on 02-08-2023, sections 2, 24 and Schedule III of the Central Goods and Services Tax Act, 2017 (Central Act No. 12 of 2017) was amended relating to the online gaming, online money gaming, specified actionable claims and virtual digital asset have been incorporated by the Central Goods and Services (Amendment) Act, 2023 (Central Act No. 30 of 2023).

Whereas, the GST Council Secretariat has communicated on 11-08-2023 to incorporate the corresponding amendments in respective state Goods and Services Tax Act with effect from 01-10-2023. Therefore It is considered necessary further to amend the Karnataka Goods and Services Tax Act, 2017 (Karnataka Act 27 of 2017).

As the matter was urgent and both Houses of the State Legislature were not in a session, The Karnataka Goods and Services Tax (Amendment) Ordinance, 2023 (Karnataka Ordinance 04 of 2023) was promulgated to achieve the above object.

The amendments made under the Karnataka Goods and Services Tax (Amendment) Ordinance, 2023 (Karnataka Ordinance 04 of 2023), shall be without prejudice to the provisions of any other law for the time being in force, providing for prohibiting, restricting or regulating betting, casino, gambling, horse racing, lottery or online gaming. However,-

(a) imposition of tax on Casinos, Horse racing and Online Gaming does not regularise the said trade; and

(b) any crime committed in the course of the same is not immune from criminal action.

This Bill seeks to replace the said Ordinance.

## ANNEXURE

### EXTRACT FROM THE KARNATAKA GOODS AND SERVICES TAX ACT, 2017 (KARNATAKA ACT 27 OF 2017)

**XX** **XX** **XX**

**2. Definitions.-** In this Act, unless the context otherwise requires,– (1) —actionable claim shall have the same meaning as assigned to it in section 3 of the Transfer of Property Act, 1882 (Central Act 4 of 1882);

**XX** **XX** **XX**

(80) **notification** means a notification published in the Official Gazette and the expressions notify and notified shall be construed accordingly;

**XX** **XX** **XX**

(102) **services** means anything other than goods, money and securities but includes activities relating to the use of money or its conversion by cash or by any other mode, from one form, currency or denomination, to another form, currency or denomination for which a separate consideration is charged;

**Explanation.-** For the removal of doubts, it is hereby clarified that the expression services includes facilitating or arranging transactions in securities;

**XX** **XX** **XX**

**(105) Supplier.-** in relation to any goods or services or both, shall mean the person supplying the said goods or services or both and shall include an agent acting as such on behalf of such supplier in relation to the goods or services or both supplied;

**XX** **XX** **XX**

(**117) valid return** means a return furnished under sub-section (1) of section 39 on which self-assessed tax has been paid in full;

**XX** **XX** **XX**

**24. Compulsory registration in certain cases.-** Notwithstanding anything contained in sub-section (1) of section 22, the following categories of persons shall be required to be registered under this Act,-

**XX** **XX** **XX**

(xi) every person supplying online information and data base access or retrieval services from a place outside India to a person in India, other than a registered person; and

**XX** **XX** **XX**

## SCHEDULE III

**[See section 7]**

### ACTIVITIES OR TRANSACTIONS WHICH SHALL BE TREATED NEITHER AS A SUPPLY OF GOODS NOR A SUPPLY OF SERVICES

**XX** **XX** **XX**

6. Actionable claims, other than lottery, betting and gambling.

**XX** **XX** **XX**

Govt. Press, Suvarna Vidhana Soudha, Belgavi, 11TH Dec, 2023, P7, W.D. , Copies 300